## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಬೆಂಗಳೂರು ಕೇಂದ್ರೀಯ ವಿಭಾಗ : ಬೆಂಗಳೂರು

ಕ್ರಸಂ: ಕರಾಸಾ/ಬೆಂ.ಕೇ.ವಿ/ಸಂ/ವಾಣಿಜ್ಯ/2359/2019–20 ದಿನಾಂಕ: 12-11-2019

### " ಸಂಧಾನ ಪ್ರಕಟಣೆ ಸಂಖ್ಯೆ: 06 /2019 "

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಕೇಂದ್ರೀಯ ವಿಭಾಗದ ವ್ಯಾಪ್ತಿಯಲ್ಲಿರುವ ನೆಲಮಂಗಲ ವಾಹನ ನಿಲ್ದಾಣದ ಮುಖ್ಯ ಕಟ್ಟಡದಲ್ಲಿ ಖಾಲಿಯಿರುವ ಉಪಹಾರ ಗೃಹ ಮತ್ತು ಮಳಿಗೆ ಸಂಖ್ಯೆ–02 ಹಾಗೂ ವಾಣಿಜ್ಯ ಸಂಕೀರ್ಣದಲ್ಲಿ ಖಾಲಿಯಿರುವ ಮಳಿಗೆ ಸಂಖ್ಯೆ:07 ಮತ್ತು 12 ರಲ್ಲಿ ಜನರಲ್ ಸ್ಟೋರ್ ವ್ಯಾಪಾರ ಮಾಡಲು ಒಂದು ವರ್ಷದ ಅವಧಿಗೆ ಅಥವಾ ಸದರಿ ಬಸ್ ನಿಲ್ದಾಣದ ಕಾಮಗಾರಿ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದೋ ಆ ದಿನದಿಂದ ತೆರವುಗೊಳಿಸುವ ಷರತ್ತಿನೊಂದಿಗೆ ಪರವಾನಿಗೆದಾರರನ್ನು ಆಯ್ಕೆ ಮಾಡಲು ಸಂಧಾನವನ್ನು ದಿನಾಂಕ: **04–12–2019** ರಂದು **14:00** ಗಂಟೆಗೆ ವಿಭಾಗೀಯ ನಿಯಂತ್ರಣಾಧಿಕಾರಿ ಕಛೇರಿ, ಕ.ರಾ.ರ.ಸಾ.ನಿಗಮ, ಬೆಂಗಳೂರು ಕೇಂದ್ರೀಯ ವಿಭಾಗ, ಶಾಂತಿನಗರ, ಬೆಂಗಳೂರು–560027 ರಲ್ಲಿ ನಡೆಸಲಾಗುವುದು.

**1)ಮಳಿಗೆ ಸಂಖ್ಯೆ–2(ಮುಕ), 112ಚದರಡಿಗಳು, ಮಾಸಿಕ ಶುಲ್ಕ ರೂ.17,220–00, ಇಎಂಡಿ ಮೊತ್ತ ರೂ.51,660–00, ಅರ್ಜಿಶುಲ್ಕ ಮತ್ತು ಜಿಎಸ್‌ಟಿ ರೂ.205–00**
**2)ಉಪಹಾರ ಗೃಹ 971 ಚದರ ಅಡಿಗಳು, ಮಾಸಿಕ ಶುಲ್ಕ ರೂ.76,736–00, ಇಎಂಡಿ ಮೊತ್ತ ರೂ.2,30,208–00, ಅರ್ಜಿಶುಲ್ಕ ಮತ್ತು ಜಿಎಸ್‌ಟಿ ರೂ. 906–00.**
**3)ಮಳಿಗೆ ಸಂಖ್ಯೆ–7(ವಾಸಂ), 118ಚದರಡಿಗಳು, ಮಾಸಿಕ ಶುಲ್ಕ ರೂ.29,645–00, ಇಎಂಡಿ ಮೊತ್ತ ರೂ.88,935–00, ಅರ್ಜಿಶುಲ್ಕ ಮತ್ತು ಜಿಎಸ್‌ಟಿ ರೂ.351–00**
**4)ಮಳಿಗೆ ಸಂಖ್ಯೆ–12(ವಾಸಂ),118ಚದರಡಿಗಳು, ಮಾಸಿಕ ಶುಲ್ಕ ರೂ.35,152–00, ಇಎಂಡಿ ಮೊತ್ತ ರೂ.1,05,456–00,ಅರ್ಜಿಶುಲ್ಕ ಮತ್ತು ಜಿಎಸ್‌ಟಿ ರೂ.416–00**

ಸಂಧಾನದಲ್ಲಿ ಭಾಗವಹಿಸುವವರು ವಿಳಾಸದ ದೃಢೀಕರಣಕ್ಕೆ ಆಧಾರ್ ಕಾರ್ಡ್ / ಮತದಾರರ ಗುರುತಿನ ಚೀಟಿ / ಪಡಿತರ ಚೀಟಿ ಯಾವುದಾದರೂ ಪ್ರತಿಯನ್ನು ಮತ್ತು ಇಎಂಡಿ ಮೊತ್ತವನ್ನು ಮತ್ತು ಅರ್ಜಿಯ ಶುಲ್ಕವನ್ನು ಡಿಡಿ/ನಗದು Divisional Controller, KSRTC, Bengaluru Central Division, Bengaluru ರವರ ಹೆಸರಿನಲ್ಲಿ ಪಡೆದು ಡಿಡಿ/ ನಗದು ರಸೀತಿಯನ್ನು ಸಲ್ಲಿಸಿ ಅರ್ಜಿಯನ್ನು ಹಾಗೂ ಷರತ್ತು ಮತ್ತು ನಿಬಂಧನೆಗಳನ್ನು ಕಛೇರಿಯ ವೇಳೆಯಲ್ಲಿ ದಿನಾಂಕ: **04–12–2019 ರಂದು 12.00** ಗಂಟೆಯವರೆಗೆ ಪಡೆಯಬಹುದು. ಮೂಲ ರಸೀತಿ / ಮೂಲ ಡಿಡಿ ಮತ್ತು ಸಂಬಂಧಪಟ್ಟ ದಾಖಲಾತಿಗಳನ್ನು ಅರ್ಜಿಯೊಂದಿಗೆ ಅಡಕಗೊಳಿಸದೇ ಇದ್ದ ಪಕ್ಷದಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಯಾವುದೇ ಕಾರಣ ನೀಡದೆ ಸಂಧಾನವನ್ನು ಪುರಸ್ಕರಿಸುವ / ರದ್ದುಪಡಿಸುವ ಅಥವಾ ಮಾರ್ಪಾಡು ಮಾಡುವ ಹಕ್ಕನ್ನು ಕ.ರಾ.ರ.ಸಾ. ಸಂಸ್ಥೆಯು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ: 7760990267 & 7760990252 ಗಳನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ.
ಕ.ರಾರ.ಸಾ.ನಿಗಮ, ಬೆಂಗಳೂರು ಕೇಂದ್ರೀಯ ವಿಭಾಗ.
ಶಾಂತಿನಗರ, ಬೆಂಗಳೂರು

**ಪ್ರತಿಯನ್ನು ಗೌರವಪೂರ್ವಕವಾಗಿ:–**

ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ) ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ.
ಮುಖ್ಯ ಗಣಕ ವ್ಯವಸ್ಥಾಪಕರು, ಕ.ರಾ.ರ.ಸಾ. ನಿಗಮ, ಕೇಂದ್ರ ಕಛೇರಿ, ರವರ ಮಾಹಿತಿಗಾಗಿ.
ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕ.ರಾ.ರ.ಸಾ.ನಿಗಮ ರವರ ಮಾಹಿತಿಗಾಗಿ.

**ಪ್ರತಿಯನ್ನು:** ಉಪ ಮುಖ್ಯ ಭದ್ರತಾ ಮತ್ತು ಜಾಗೃತಾಧಿಕಾರಿ / ವಿಭಾಗ ಸಂಚಾಲನಾಧಿಕಾರಿ / ಲೆಕ್ಕಾಧಿಕಾರಿ / ಸಹಾಯಕ ಕಾಮಗಾರಿ ಅಭಿಯಂತರರು / ಕಾನೂನು ಅಧಿಕಾರಿ, ಕ.ರಾ.ರ.ಸಾ. ನಿಗಮ, ಬೆಂಗಳೂರು ಕೇಂದ್ರೀಯ ವಿಭಾಗ ಬೆಂಗಳೂರು ರವರ ಮಾಹಿತಿಗಾಗಿ. ಹಾಗೂ ದಿನಾಂಕ: **04–12–2019** ರಂದು ತಪ್ಪದೇ ಸಂಧಾನದಲ್ಲಿ ಭಾಗವಹಿಸಲು ಸೂಚಿಸಲಾಗಿದೆ.

ವಿಭಾಗೀಯ ನಿಯಂತ್ರಣಾಧಿಕಾರಿ.